ಶ್ರೀ ಎಸ್. ಸುರೇಶ್ ಕುಮಾರ್:– ಮಾನ್ಯ ಸದಸ್ಯರಿಗೆ ನಾನು ಆಶ್ವಾಸನೆಯನ್ನು ಕೊಡುತ್ತೇನೆ. ಟೆಂಡರ್ ಪ್ರಕ್ರಿಯೆಯಲ್ಲಿ ಏನಾದರೂ ವಿಳಂಬವಾಗಿದ್ದಲ್ಲಿ, ಅದನ್ನು ಸರಿಪಡಿಸಿ ಅತಿ ಶೀಘ್ರದಲ್ಲಿ ಪಂಪ್ ಮತ್ತು ಮೋಟಾರನ್ನು ಒದಗಿಸಿ ನೀರಿನ ಸಮಸ್ಯೆಯನ್ನು ನೀಗಿಸುತ್ತೇವೆ.

ಅಧ್ಯಕ್ಷರು:– ಮಾನ್ಯ ಸಿ.ಬಿ. ಸುರೇಶ್ ಬಾಬುರವರೇ, ತಮ್ಮ ಪ್ರಶ್ನೆ ವರ್ಗಾವಣೆಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ಕಡಲ ಕೊರೆತ ತಡೆಯುವಿಕೆ

54 (478) ಶ್ರೀ ಖಾದರ್ ಯು.ಟಿ. (ಮಂಗಳೂರು) ಮಾನ್ಯ ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ಕಡಲ ಕೊರೆತ ತಡೆಯುವ ಶಾಶ್ವತ ಕಾಮಗಾರಿಯು ಯಾವ ಹಂತದಲ್ಲಿದೆ; ಈ ಕಾಮಗಾರಿಯು ವಿಳಂಬಗೊಳ್ಳಲು ಕಾರಣಗಳೇನು;

(ಆ) ಕಡಲ ಕೊರೆತವನ್ನು ತಡೆಗಟ್ಟಲು ಈ ವರ್ಷ ಬಿಡುಗಡೆ ಮಾಡಿ ಖರ್ಚು ಮಾಡಿದ ಹಣವೆಷ್ಟು (ವಿವರ ಒದಗಿಸುವುದು)

(ಇ) ಮುಂದಿನ ಮಳೆಗಾಲದಲ್ಲಿ ನಾಗರೀಕರ ಆಸ್ತಿ ಪಾಸ್ತಿಗಳಿಗೆ ಹಾನಿಯಾಗದಂತೆ ಕೈಗೊಳ್ಳುವ ಮುಂಜಾಗ್ರತಾ ಕ್ರಮಗಳೇನು?

ಜೆ. ಕೃಷ್ಣ ಪಾಲೇಮಾರ್ (ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

(ಅ) ಎಡಿಬಿ ಯೋಜನೆಯ ಮೊದಲ ಹಂತದಲ್ಲಿ ಉಳ್ಳಾಲದಲ್ಲಿ ಕಡಲ ಕೊರೆತ ಶಾಶ್ವತ ಪ್ರತಿಬಂಧಕ ಕಾಮಗಾರಿಗೆ ಎರಡನೇ ಬಾರಿ ಟೆಂಡರ್ ಕರೆಯಲಾಗಿದ್ದು ಟೆಂಡರ್ ಸ್ವೀಕರಿಸಲು ದಿನಾಂಕ 13.2.2012 ನ್ನು ನಿಗದಿಪಡಿಸಲಾಗಿತ್ತು. ಕೇರಳ ರಾಜ್ಯದ ಕೋವಲಂ ನಲ್ಲಿ ನಿರ್ಮಿಸಿದ Reef ನ ವಿನ್ಯಾಸ ಮತ್ತು ಕಾಮಗಾರಿಯ ಪರಿಶೀಲನೆ ಮಾಡುವ ತನಕ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಲು ಎಡಿಬಿಯು ಸೂಚಿಸಿದ್ದರ ಹಿನ್ನೆಲೆಯಲ್ಲಿ ಪ್ರಸ್ತುತ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಲಾಗಿದೆ.

ಎಡಿಬಿ ಮತ್ತು CWPRS ತಜ್ಞರೊಂದಿಗೆ ಕೋವಳಂನ ಕಾಮಗಾರಿಯನ್ನು ಫೆಬ್ರವರಿ ತಿಂಗಳಿನಲ್ಲಿ ಪರಿಶೀಲಿಸಲು ನಿಗದಿಪಡಿಸಲಾಗಿದೆ. ಈ ಕಾರಣದಿಂದ ಮರುಟೆಂಡರ್ ಕರೆಯಲು ವಿಳಂಬವಾಗಿರುತ್ತದೆ.

(ಆ) ಪ್ರಸ್ತುತ ಸಾಲಿನ ಆಯವ್ಯಯದಲ್ಲಿ ಎಡಿಬಿ ಯೋಜನೆಗೆ ರೂ. 50.00 ಕೋಟಿಗಳ ಅನುದಾನವನ್ನು ಒದಗಿಸಿದ್ದು ಈವರೆವಿಗೂ ಯಾವುದೇ ವೆಚ್ಚ ಮಾಡಿರುವುದಿಲ್ಲ.

ತೀವ್ರ ಸಮುದ್ರ ಕೊರೆತ ಉಂಟಾಗುವ ಪ್ರದೇಶಗಳಲ್ಲಿ ಲೆಕ್ಕಶೀರ್ಷಿಕೆ 4711–02–01–103 ಸಮುದ್ರ ಕೊರೆತ ಕಾಮಗಾರಿಗಳಡಿಯಲ್ಲಿ ಒದಗಿಸಿರುವ ರೂ. 551.81 ಲಕ್ಷಗಳ ಅನುದಾನದಿಂದ ಈ ಕೆಳಗಿನಂತೆ ವೆಚ್ಚ ಮಾಡಲಾಗಿದೆ.

1. ಮಂಗಳೂರು ತಾ: ಸಸಿಹಿತ್ಲು ಮತ್ತು ಹೊಸಬೆಟ್ಟು ರೂ. 73.75 ಲಕ್ಷ

2. ಉಡುಪಿ ತಾಲ್ಲೂಕು ಉದ್ಯಾವರ ಮತ್ತು ಪಡುತೊನ್ಸೆ –ರೂ. 48.93 ಲಕ್ಷ

3. ಕುಂದಾಪುರ ತಾಲ್ಲೂಕು ಪಡುವರಿ ರೂ. 64.38 ಲಕ್ಷ

4. ಹೊನ್ನಾವರ ತಾಲ್ಲೂಕು ಮಂಕಿದೊಡ್ಡಗುಂದ ಮತ್ತು ಪಾವಿನ ಕುರ್ವೆ – ರೂ. 183.68 ಲಕ್ಷ

5. ಕುಮಟಾ ತಾಲ್ಲೂಕು: ದುಬ್ಬನಶಶಿ–ರೂ.21.25 ಲಕ್ಷ

6. ಅಂಕೋಲಾ ತಾಲ್ಲೂಕು: ಹಾರವಾಡ–ರೂ.11.25 ಲಕ್ಷ

(ಇ) ಸಮುದ್ರ ಕೊರೆತ ಉಂಟಾಗುವ ಪ್ರದೇಶಗಳ ವಸತಿ ಮನೆ, ಶಾಲಾ ಕಟ್ಟಡ ಮತ್ತು ಸಾರ್ವಜನಿಕ ಸಂಪರ್ಕ ರಸ್ತೆಗೆ ಹಾನಿಯಾಗುವ ಸಂಭವವಿದ್ದಲ್ಲಿ ಇಲಾಖಾ ಅನುದಾನದಿಂದ ತುರ್ತು ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ. ಯಾವುದೇ ಪ್ರಾಣ ಹಾನಿಯಾಗದಂತೆ ತೀವ್ರ ಸಮುದ್ರ ಕೊರೆತ ಉಂಟಾಗುವ ಪ್ರದೇಶದಲ್ಲಿನ ಜನರನ್ನು ಸುರಕ್ಷಿತ ಸ್ಥಳಕ್ಕೆ ಜಿಲ್ಲಾಡಳಿತದ ವತಿಯಿಂದ ಸ್ಥಳಾತರಿಸಲಾಗುತ್ತಿದೆ.

ಶ್ರೀ ಯು.ಟಿ. ಖಾದರ್:– ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮಂತ್ರಿಗಳು ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಅಲ್ಲಿ ಏನು ಸಮಸ್ಯೆ ಇದೆ ಎಂದರೆ, ಉಳ್ಳಾಲದ ಕಡಲ

ಕೊರೆತದ ಸಮಸ್ಯೆ ಬಹಳಷ್ಟು ವರ್ಷಗಳಿಂದ ಇದೆ. ಇದರಿಂದಾಗಿ ಬಹಳಷ್ಟು ಮನೆಗಳಿಗೆ ಹಾಗೂ ಪ್ರಾಣಿಗಳಿಗೆ ಸಾಕಷ್ಟು ಹಾನಿಯಾಗಿ ಸಮಸ್ಯೆಗಳು ಉಂಟಾಗಿವೆ. ಇದರ ಬಗ್ಗೆ ನಾಲ್ಕು ವರ್ಷಗಳಿಂದ ಎ.ಡಿ.ಬಿ. ಯೋಜನೆಯಲ್ಲಿ ಶಾಶ್ವತ ತಡೆಗೋಡೆ ಮಾಡುತ್ತೇವೆಂದು ಹೇಳಿಕೊಂಡು ಬಂದಿದ್ದೀರಿ. ಇದಕ್ಕೆ ಸಂಬಂಧಿಸಿದಂತೆ ಇಂಜಿನಿಯರ್‌ಗಳು ಬಂದು ಬೇಕಾದಷ್ಟು ಪ್ಲಾನ್ ಮಾಡಿದರು. ಒಮ್ಮೆ ಟೆಂಡರ್‌ನ್ನು ಸಹ ಕರೆದರೂ. ಟೆಂಡರ್ ಆದ ನಂತರ ಅದು ಸಿಂಗಲ್ ಟೆಂಡರ್ ಆಗಿದೆ; ನಮ್ಮ ಎ.ಡಿ.ಬಿ. ಯೋಜನೆ ಪ್ರಕಾರ ಸಿಂಗಲ್ ಟೆಂಡರ್ ಆಗುವುದಿಲ್ಲವೆಂದು ಈಗ re-tender ಮಾಡಿದ್ದಾರೆ. ಅದು 2–3 ತಿಂಗಳು ಹಾಗೆ ಇತ್ತು. 31ನೇ ತಾರೀಖು ಟೆಂಡರ್ ಓಪನ್ ಮಾಡಬೇಕಾಗಿತ್ತು. ಈಗ ಮತ್ತೆ ಕೇರಳಕ್ಕೆ ಹೋಗಿ, ಈ ಹಿಂದೆ ಮಾಡಿರುವ ಯೋಜನೆಯನ್ನು ನೋಡಿ ಬರುತ್ತೇವೆ, ತದನಂತರ ಟೆಂಡರ್ ಓಪನ್ ಮಾಡುತ್ತೇವೆಂದು ಇಂಜಿನಿಯರ್‌ಗಳು ಹೇಳುತ್ತಿದ್ದಾರೆ. ಇದರಿಂದಾಗಿ ಇದು ಮತ್ತೆ 2–3 ವರ್ಷ ವಿಳಂಬವಾಗುವ ಸಾಧ್ಯತೆಗಳಿವೆ ಎಂದು ನಾನು ಹೇಳಲಿಕ್ಕೆ ಇಚ್ಛಿಸುತ್ತೇನೆ. ಎ.ಡಿ.ಬಿ. ಯೋಜನೆಯನ್ನು ನಾವು ಬದಿಗಿಡಬೇಕು. ಅಲ್ಲಿ ಕೆಲವು ಅಪಾಯಕಾರಿ ಸ್ಥಳಗಳೇನಿವೆ, ಅಲ್ಲಿ ಮಳೆ ಏನಾದರೂ ಬಂದರೆ, ಅದರಿಂದ ಸಾಕಷ್ಟು ಮನೆಗಳಿಗೆ, ಪ್ರಾಣಿಗಳಿಗೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಖಂಡಿತವಾಗಿಯೂ ಅಪಾಯ ಉಂಟಾಗುತ್ತದೆ. ಅದನ್ನು ತಡೆಗಟ್ಟಲು ಅಲ್ಲಿರುವ ಅಪಾಯಕಾರಿ ಸ್ಥಳಗಳು ಎಲ್ಲಿವೆಯೋ, ಆ ಸ್ಥಳಗಳಿಗೆ ಮಾನ್ಯ ಸಚಿವರು ಅಧಿಕಾರಿಗಳ ಜೊತೆಯಲ್ಲಿ ಭೇಟಿ ನೀಡಿ, ಅದನ್ನು ಮಾರ್ಕ್ ಮಾಡಿ, ಅದಕ್ಕೆ ಬೇಕಾದಂತಹ ಅನುದಾನವನ್ನು ಈಗಲೇ ಮುಂದಿನ ಬಜೆಟ್‌ನಲ್ಲಿ ಮೀಸಲಿಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲದಿದ್ದ ಪಕ್ಷದಲ್ಲಿ ಕಡಲು ಕೊರೆತ ಉಂಟಾದಾಗ, ಅದನ್ನು ತಡೆಗಟ್ಟಲು ನಮ್ಮಲ್ಲಿ ದುಡ್ಡಿಲ್ಲದಂತಹ ಪರಿಸ್ಥಿತಿ ಉದ್ಭವವಾಗುತ್ತದೆ ಎಂದು ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ಅಭಯಚಂದ್ರ :– ಮಾನ್ಯ ಅಧ್ಯಕ್ಷರೆ, ಕರಾವಳಿಯಲ್ಲಿ ಕಡಲ ಕೊರೆತ ಒಂದು ದೊಡ್ಡ ಸಮಸ್ಯೆಯಾಗಿದೆ. ಸುಮರು 10 ವರ್ಷಗಳಿಂದ ಈ ಕಡಲು ಕೊರೆತದ ಬಗ್ಗೆ ಆ ಜಿಲ್ಲೆಯಲ್ಲಿ ಜನರು ಧ್ವನಿ ಎತ್ತಿದ್ದಾರೆ. ಆದರೆ ಬೇರೆ ಬೇರೆ ಯೋಜನೆಗಳನ್ನು ನಾವು ರೂಪಿಸುತ್ತಿರುವುದರಿಂದ ಅಲ್ಲಿ ಡಿಲೇ ಆಗಿ ಅಲ್ಲಿ ವಾಸಿಸುತ್ತಿರುವ ಜನತೆ ಅಭದ್ರತೆಯಲ್ಲಿದ್ದಾರೆ.

ನನ್ನ ಕ್ಷೇತ್ರ ಇವತ್ತು ಸಸಿಹಿತ್ಲು ಇರಬಹುದು, ಮಾನ್ಯ ಕೃಷ್ಣ ಪಾಲೇಮಾರ್ ರವರ ಕ್ಷೇತ್ರ ಸೂರತ್ಕಲ್ ಇರಬಹುದು, ಉಳ್ಳಾಲ ಇರಬಹುದು, ಈ ಮೂರು ಕ್ಷೇತ್ರಗಳಲ್ಲಿಯೂ ಕೂಡಾ ಅದೇ ರಿತಿಯ ಪರಿಸ್ಥಿತಿ ಇದೆ. ಈಗ 10 ವರ್ಷಗಳಿಂದ ಇಲ್ಲಿ ಯಾವುದೇ ಯೋಜನೆಗಳು ಅನುಷ್ಠಾನವಾಗುತ್ತಿಲ್ಲ. ನಾವು ಎ.ಡಿ.ಬಿ. ಯಲ್ಲಿ ಆಗುತ್ತದೆಂದು ಕಾಯ್ದು ಇವತ್ತು ಜನ ನಮ್ಮನ್ನು ನಂಬದಂತಹ ಪರಿಸ್ಥಿತಿಯಲ್ಲಿದ್ದಾರೆ. ಜನ ಅಭದ್ರತೆಯಲ್ಲಿದ್ದಾರೆ. ಜನರು ಬದುಕಲಿಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡುವುದು ಸರ್ಕಾರದ ಕರ್ತವ್ಯ. ಆ ದೃಷ್ಟಿಯಿಂದ ಅಲ್ಲಿ ಏನಾದರೂ ಮಾಡಿ ರಾಜ್ಯ ಸರ್ಕಾರದಿಂದ ಅನುದಾನವನ್ನು ಈ ಬಜೆಟ್‌ನಲ್ಲಿ ಮೀಸಲಾಗಿಟ್ಟು ತಡೆಗೋಡೆಯನ್ನು ನಿರ್ಮಾಣ ಮಾಡಬೇಕೆಂದು ಕಳಕಳಿಯ ವಿನಂತಿ.

ಶ್ರೀ ಎನ್. ಯೋಗೀಶ್ ಭಟ್ (ಮಾನ್ಯ ಉಪಾಧ್ಯಕ್ಷರು) :– ಮಾನ್ಯ ಸಭಾಧ್ಯಕ್ಷರೆ, ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂದರೆ, ಅನೇಕ ಸಾವು ನೋವುಗಳಾಗುವಂತಹ ದುಸ್ಥಿತಿ ಕ್ಷೇತ್ರದಲ್ಲಿ ಉಂಟಾಗಿದೆ. ಕರಾವಳಿ ಭಾಗದಲ್ಲಂತೂ ಬಹಳ ಅಪಾಯಕಾರಿ ಸನ್ನಿವೇಶ ಮುಟ್ಟುತ್ತಿದೆ. ಒಂದು ಕಡೆಯಲ್ಲಿ ಕಡಲ ಕೊರೆತಕ್ಕೆ ಸಂಬಂಧಪಟ್ಟಂತೆ ಸಮಸ್ಯೆ ಎದುರಾಗುತ್ತಿದೆ. ಇನ್ನೊಂದು ಕಡೆಯಲ್ಲಿ ನದಿ ಸಮುದ್ರ ಸೇರುವಂತಹ ಕಡೆಗಳಲ್ಲಿ, ಅಳಿವೆ ಬದಿಗಳಲ್ಲಿ ಈ slit accumulate ಆಗಿ, ಹೂಳೆತ್ತುವುದು ಸರಿಯಾಗಿ ಆಗದೆ, ಎಷ್ಟು ಪ್ರಾಣ ಹಾನಿಯಾಯಿತು ಎಂಬುದನ್ನು ತಾವು ಗಮನಿಸಬೇಕು. ಈ ರೀತಿ ಬಹಳ ಕಷ್ಟಕರವಾದ ಸನ್ನಿವೇಶದಲ್ಲಿ ನಮ್ಮ ಮೀನುಗಾರರು ಇದ್ದಾರೆ. ಈ ಹಿನ್ನೆಲೆಯಲ್ಲಿ ಎ.ಡಿ.ಬಿ. ಯೋಜನೆಯ ಅನುಷ್ಠಾನಕ್ಕೆ ನಾವು ಆದ್ಯತೆಯನ್ನು ಕೊಡಬೇಕು. ಅದರ ಜೊತೆಗೆ ತುರ್ತಾಗಿ dredger ಒಂದನ್ನು ಖರೀದಿ ಮಾಡಿ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಜೆ. ಕೃಷ್ಣ ಪಾಲೆಮಾರ್ (ಬಂದರು, ಒಳನಾಡು ಜಲಸಾರಿಗೆ ಹಾಗೂ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):– ಮಾನ್ಯ ಗೌರವಾನಿತ್ವ ಸದಸ್ಯರಾದ ಯು.ಟಿ. ಖಾದರ್ ರವರು ಇವತ್ತು ಎ.ಡಿ.ಬಿ. ಯೋಜನೆ ತಡವಾಗುತ್ತಿದೆ ಎಂದು ಹೇಳಿದರು. ಎ.ಡಿ.ಬಿ. ಯೋಜನೆಯು ಬೇಗ ಅನುಷ್ಠಾನವಾಗಬೇಕು ಎನ್ನುವ ನಿಟ್ಟಿನಲ್ಲಿ ಎಲ್ಲಾ ಟೆಂಡರ್‌ಗಳ

ಪ್ರಕ್ರಿಯೆ ಕಂಪ್ಲೀಟ್ ಆಗಿದೆ. ಅಲ್ಲಿ ಎರಡನೇ ಬಾರಿಗೆ ಟೆಂಡರ್‌ನ್ನು ಕರೆದಿದ್ದೇವೆ. ಪ್ರಥಮ ಬಾರಿಗೆ ಟೆಂಡರ್ ಕರೆದಾಗ ಕೇವಲ ಒಬ್ಬರು ಮಾತ್ರ participate ಮಾಡಿದ್ದರಿಂದ ಮತ್ತೆ ಎರಡನೇ ಬಾರಿಗೆ ಟೆಂಡರ್ ಕರೆದಿದ್ದೇವೆ. ಇದು 911 ಕೋಟಿ ರೂ.ಗಳ ಬಹಳ ದೊಡ್ಡ ಯೋಜನೆಯಾಗಿದೆ. ಹೊಸ technology ನ್ನು ನಾವು ಅಳವಡಿಸಿಕೊಂಡಿದ್ದೇವೆ. ಬೇರೆ ಕಡೆ ಅಂದರೆ ಕೇರಳ ರಾಜ್ಯದ ಕೋವಲಂ ನಲ್ಲಿ ಈ ಟೆಕ್ನಾಲಜಿ ಬಳಸಿ ಮಾಡಿದಂತಹ ಕೆಲಸ ಸಂಪೂರ್ಣವಾಗಿ ಹಾಳಾಗಿದೆ ಎಂಬ ಸುದ್ದಿ ನಮಗೆ ಸಿಕ್ಕಿತ್ತು. ಅದರ ಪ್ರಕಾರ ತಾತ್ಕಾಲಿಕವಾಗಿ ಅದನ್ನು ರದ್ದುಪಡಿಸಿದ್ದೇವೆ. ಆ ನಂತರ ನಮ್ಮ ಇಂಜಿನಿಯರುಗಳು ಅಲ್ಲಿಗೆ ಹೋಗಿ ಅದನ್ನು ಸಂಪೂರ್ಣವಾಗಿ ನೋಡಿದ ಮೇಲೆ, ಹೊಸ ಟೆಂಡರ್ ಪ್ರಕ್ರಿಯೆಯನ್ನು ಮಾಡಿ, ಮತ್ತೆ ಎ.ಡಿ.ಬಿ. ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆ. ಸಮುದ್ರ ಕೊರೆತ ಇರುವಂಥದ್ದು ಬಹಳ ಸಹಜ. ನಾನೂ ಕೂಡಾ ಕರಾವಳಿ ಭಾಗದವನೇ ಆಗಿದ್ದು, ನನ್ನ ವಿಧಾನ ಸಭಾ ಕ್ಷೇತ್ರದಲ್ಲಿಯೂ ಕೂಡಾ ಬಹಳಷ್ಟು ಕಡಲ ಕೊರೆತ ಆಗುತ್ತಿದೆ. ಮುಖ್ಯವಾಗಿ ಮಾನ್ಯ ಯು.ಟಿ. ಖಾದರ್ ಅವರ area ದಲ್ಲಿ ಹೆಚ್ಚು, ಆನಂತರ ನನ್ನ area ದಲ್ಲೆ ಹೆಚ್ಚಾಗುತ್ತದೆ. ಮಾನ್ಯ ಯೋಗೀಶ್ ಭಟ್ ರವರ area ಮತ್ತು ಮಾನ್ಯ ಅಭಯ್ ಚಂದ್ರ ಅವರ ಸಸಿಹಿತ್ಲು area ದಲ್ಲಿ ಕಡಲ ಕೊರೆತ ಆಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಅದು ತಮಗೂ ಗೊತ್ತಿದೆ. ಈ ಸಲ ಬಹಳ ವಿಶೇಷವಾಗಿ, ಗಂಭೀರವಾಗಿ ಪರಿಶೀಲನೆ ಮಾಡುತ್ತೇವೆ. ಮಾನ್ಯ ಯು.ಟಿ. ಖಾದರ್ ರವರು ಹೇಳಿದ ಹಾಗೆ ಎಲ್ಲೆಲ್ಲಿ ಕಡಲ ಕೊರೆತ ಆಗುತಿದೆಯೋ, ಅಲ್ಲಿಗೆ ನಾನೇ ಸ್ವತಃ ಭೇಟಿ ಕೊಟ್ಟು ಪರಿಶೀಲನೆ ನಡೆಸುತ್ತೇನೆ. ಅದೃಷ್ಟವಶಾತ್ ಈ ವರ್ಷ ಕಡಲ ಕೊರೆತ ಆಗಲಿಲ್ಲ. ಮುಂದಿನ ದಿನಗಳಲ್ಲಿ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಕಡಲ ಕೊರೆತಕ್ಕೆ ಬೇಕಾದಂತಹ ಹಣ ಒದಗಿಸಿಕೊಳ್ಳುತ್ತೇವೆ. ಕರಾವಳಿ ಭಾಗದವರೇ ಮಾನ್ಯ ಮುಖ್ಯಮಂತ್ರಿಗಳು ಆಗಿದ್ದಾರೆ. ಮಾನ್ಯ ಯೋಗೀಶ್ ಭಟ್‌ರೂ ಸಹ ಅವರನ್ನು ಕೇಳಿದ್ದಾರೆ. ಹೀಗಾಗಿ ಅವರು ಈ ಬಾರಿಯ ಬಜೆಟ್‌ನಲ್ಲಿ ಹೆಚ್ಚು ಹಣವನ್ನು ಕೊಡುತ್ತಾರೆ. ಅದರಿಂದ ಎಲ್ಲ ಕಡೆಯಲ್ಲೂ ಕಡಲ ಕೊರೆತವನ್ನು ನಿಲ್ಲಿಸುವಂಥದ್ದು ಮತ್ತು ಎಲ್ಲಿ ಹೂಳು ತುಂಬಿದೆಯೋ, ಅದನ್ನು ತೆಗೆಯುವಂತಹ ಕೆಲಸವನ್ನೂ ಕೂಡಾ ಮಾಡುತ್ತೇನೆಂಬ ಆಶ್ವಾಸನೆಯನ್ನು ಈ ಸಂಧರ್ಭದಲ್ಲಿ ಕೊಡುತ್ತೇನೆ.

ಶ್ರೀ ಯು.ಟಿ. ಖಾದರ್:– ಎಲ್ಲೆಲ್ಲಿ ಸರ್ಕಾರ ಹಣ ಖರ್ಚು ಮಾಡಿದೆ ಎಂಬ ಪ್ರಶ್ನೆಯನ್ನು ಕೇಳಿದ್ದೆ. ಮಾನ್ಯ ಸಚಿವರು ಹೊಸಬೆಟ್ಟು, ಉಡುಪಿ, ಕುಂದಾಪುರ, ಹೊನ್ನಾವರ, ಕುಮುಟಾಗಳಲ್ಲಿ ಹಣ ಖರ್ಚು ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದೀರಿ. ನಮ್ಮ ಉಳ್ಳಾಲದಲ್ಲಿ ಒಂದು ನಯಾ ಪೈಸೆಯೂ ಖರ್ಚು ಮಾಡಿರುವುದು ಕಾಣುತ್ತಿಲ್ಲ. ಮುಂದಿನ ವರ್ಷ ಆ ರೀತಿ ಆಗಬಾದರು. ಪ್ರಥಮ ಆದ್ಯತೆಯನ್ನು ವಹಿಸಿ ಎಲ್ಲೆಲ್ಲಿ ಅಪಾಯಕಾರಿ ಸ್ಥಳಗಳಿವೆಯೋ, ಅಲ್ಲಿಗೆ ಭೇಟಿ ನೀಡಿ, ಕಡಲ ಕೊರೆತ ಆಗದಂತೆ ತಡೆಗೋಡೆಯನ್ನು ಕಟ್ಟಲು ಅವಕಾಶ ಮಾಡಿಕೊಳ್ಳಬೇಕು.

ಬಹುಶಃ dredging ಬಗ್ಗೆ ಈಗಾಗಲೇ, ಬಹಳಷ್ಟು ವರ್ಷಗಳಿಂದ ಮೀನುಗಾರಿಕೆಯಲ್ಲಿ ತೊಂದರೆಯಾಗುತ್ತದೆ, ಹಲವಾರು ಅನಾಹುತಗಳಾಗಿವೆ, ನಮ್ಮಲ್ಲಿ dredging ಬಗ್ಗೆ ನಮ್ಮಲ್ಲಿ ಸೂಕ್ತವಾದ ವ್ಯವಸ್ಥೆ ಇಲ್ಲದಿದ್ದರೆ, ಪಕ್ಕದ ಕೇರಳ ರಾಜ್ಯದಲ್ಲಿ ಯಾವ ಸಿಸ್ಟಂ ಎಂದರೆ, ಅದನ್ನು ಅವರು ಹೊರಗುತ್ತಿಗೆಗೆ ಕೊಡುತ್ತಾರೆ. ಮಳೆಗಾಲದಲ್ಲಿ ಹಳ್ಳಿಗಳಲ್ಲಿ ತೆಗೆದುಕೊಂಡು ಹೋಗುವ contract, ಅವರು ಅದನ್ನು ಮಾಡಿಕೊಳ್ಳಲಿ, ಎಷ್ಟೋ ಜನರು Machines ಇಟ್ಟುಕೊಂಡಿದ್ದಾರೆ, ಅಂಥವರಿಗೆ ನೀವು ಆ ಸ್ಥಳವನ್ನು ನೋಟ್ ಮಾಡಿ, ಹೊರ ಗುತ್ತಿಗೆಗೆ ಕಾಂಟ್ರಾಕ್ಟ್ ಗೆ ಕೊಡಿ, ನಾವು ಏತಕ್ಕೆ ತಲೆಬಿಸಿ ಮಾಡಿಕೊಳ್ಳಬೇಕು, ದುಡ್ಡಿಲ್ಲವೆಂದು ಅಲ್ಲಿ ಮೀನುಗಾರರನ್ನು ಸಾಯಿಸುವುದೇಕೆ? ಅಂಥ ಏನಾದರೂ ಯೋಜನೆ ಇದ್ದರೆ ಅದನ್ನು ನೋಡಿಕೊಂಡು, ಈ ರೀತಿ ಒಂದು ವರ್ಷಕ್ಕೆ ಆಕ್ಷನ್ ಮಾಡಿ ಇಷ್ಟಿಷ್ಟು ಎಂದು ಕೊಡುತ್ತಾರೆ, ನಮಗೆ ಕೆಲಸವೂ ಆಗುತ್ತದೆ.

ಶ್ರೀ ಕೆ. ಅಭಯಚಂದ್ರ : ಕರಾವಳಿಯ ಮೀನುಗಾರರು ಬಹಳ ತೊಂದರೆಯಲ್ಲಿದ್ದಾರೆ. dredging ಮಾಡದಿದ್ದಕ್ಕಾಗಿ ಅಲ್ಲಿ ಹೂಳು ತುಂಬಿ, ಪ್ರತಿವರ್ಷ ಅಲ್ಲಿ ಮೀನುಗಾರರು ಅಪಘಾತಕ್ಕೀಡಾಗಿ ಸಾವುಗಳು ಆಗುತ್ತಿವೆ. ಆದ್ದರಿಂದ ಆ ಸಾವನ್ನು ತಡೆಗಟ್ಟುವುದಕ್ಕೆ dredging machine ಅನ್ನು purchase ಮಾಡಬೇಕು, ಅದಕ್ಕೆ ಏನಾದರೂ ವ್ಯವಸ್ಥೆಯನ್ನು ಕೂಡಲೇ ಮಾಡಬೇಕು.

ಶ್ರೀ ಜೆ. ಕೃಷ್ಣ ಪಾಲೇಮಾರ್: ಈ ವರ್ಷ dredgingಗೆ ಬಹಳ ಗಮನವನ್ನು ಕೊಟ್ಟಿದ್ದೇವೆ. ಈಗಾಗಲೇ ನಮ್ಮ ಕಾರವಾರದಲ್ಲಿ 15 ಕೋಟಿ ರೂಪಾಯಿಗಳನ್ನು ಸರ್ಕಾರದ ಕೊಟ್ಟಿದ್ದರೂ ಕೂಡ, ಮೊನ್ನೆ ತರಾತುರಿಯಲ್ಲಿ ಪುನಃ 20 ಕೋಟಿ ರೂಪಾಯಿಗಳನ್ನು ಸಚಿವ ಸಂಪುಟದಲ್ಲಿ ಮಂಜೂರು ಮಾಡಿಸಿ, ಒಟ್ಟು 35 ಕೋಟಿ ರೂಪಾಯಿಗಳ ಯೋಜನೆಯನ್ನು ಕೈಗೆತ್ತಿಕೊಂಡಿದ್ದೇವೆ. ಮಂಗಳೂರಿನಲ್ಲೂ ಕೂಡ dredging ಕೆಲಸ

ನಡೆಯುತ್ತಿದೆ, ನಡೆಯುವುದಕ್ಕೆ ಟೆಂಡರ್ ಪ್ರಕ್ರಿಯೆಯಾಗುತ್ತಿದೆ. ಮತ್ತೆ ಹೆಜಮಾಡಿಯಲ್ಲೂ ಕೂಡ ಇವತ್ತು dredging ಕೆಲಸವಾಗುತ್ತಿದೆ. ಹಾಗೆ ಎಲ್ಲಾ ಕಡೆ dredging ಮಾಡುತ್ತಿದ್ದೇವೆ. ಈ ಸಲ ಹೊಸ ಬಜೆಟ್‌ನಲ್ಲಿ ಹೆಚ್ಚು dredging ಮಾಡುತ್ತೇವೆ. ಇವತ್ತು ಮಾನ್ಯ ಸದಸ್ಯರಾದ ಖಾದರ್‌ರವರು ಹೇಳಿದಂತೆ, ಬೇರ ಕಡೆಗೆ maintenance ಗೆ ಕೊಡುವುದು, ಮತ್ತೆ dredger ತೆಗೆದುಕೊಳ್ಳುವುದು ಅಷ್ಟು ಸೂಕ್ತವಲ್ಲವೆನಿಸುತ್ತದೆ. ಏಕೆಂದರೆ, ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆಗಳನ್ನು ನಾವು ಕೈಗೆತ್ತಿಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ dredging ಆಗದೇ ಪೋರ್ಟ್ ಉಳಿದಿದೆ ಎನ್ನುವುದು ನನ್ನ ಭಾವನೆ.

ಶ್ರೀ ಎನ್. ಯೋಗೀಶ್ ಭಟ್ (ಮಾನ್ಯ ಉಪಾಧ್ಯಕ್ಷರು): ಮಾನ್ಯ ಅಧ್ಯಕ್ಷರೆ, ತಪ್ಪು ತಿಳಿದುಕೊಳ್ಳಬಾರದು, ಖಾಸಗಿ ಸಂಸ್ಥೆಗಳಿಂದ dredger ತಂದು, ಅವರಿಗೆ ಕೋಟಿಗಟ್ಟಲೆ ಹಣವನ್ನು ಕೊಡುವ ಬದಲು, ನಮ್ಮಲ್ಲಿ 350 ಕಿ.ಮೀ. ಉದ್ದವಿರುವ ಕರಾವಳಿ ತೀರವಿದೆ, ನಮಗೆ ಪ್ರವಾಸೋದ್ಯಮಕ್ಕೂ ಅನುಕೂಲವಾಗುತ್ತದೆ, ಕರಾವಳಿಯ ಮೀನುಗಾರಿಕೆಗೂ ಅನುಕೂಲವಾಗುತ್ತದೆ. dredger ಅನ್ನು ಖರೀದಿ ಮಾಡುವ ವಿಚಾರದಲ್ಲಿ ವಿಶೇಷ ಆಸಕ್ತಿಯನ್ನು ವಹಿಸಬೇಕೆಂದು ವಿನಂತಿ.

ಶ್ರೀ ಕೃಷ್ಣ ಪಾಲೇಮಾರ್: ಖಾಸಗಿ ಸಂಸ್ಥೆಗಳಿಗೆ dredging ಕೊಡುವುದನ್ನು ಕಡಿಮೆ ಮಾಡಿದ್ದೇವೆ. dredging Corporation of India ಕೇಂದ್ರ ಸರ್ಕಾರದ್ದಾಗಿರುವುದರಿಂದ ಅದಕ್ಕೆ ಪಾರದರ್ಶಕತೆ ಇರುತ್ತದೆ ಎನ್ನುವ ನಿಟ್ಟಿನಲ್ಲಿ, ಅವರಿಗೆ ಹೆಚ್ಚಾಗಿ ಕೊಟ್ಟು ಕೆಲಸವನ್ನು ಮಾಡಿಸಲಾಗುತ್ತಿದೆ. ಮುಂದಿನ ಎಲ್ಲಾ ವಿಚಾರಗಳನ್ನು ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

ಕುಡಿಯುವ ನೀರಿನ ಯೋಜನೆ

55 (179) ಶ್ರೀ ಶಿವಶಂಕರ ರೆಡ್ಡಿ. ಎನ್. ಹೆಚ್. (ಗೌರಿಬಿದನೂರು) ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಗೌರಿಬಿದನೂರು ಪಟ್ಟಣಕ್ಕೆ ಕಿಂಡಿ ಅಣೆಕಟ್ಟು ಕುಡಿಯುವ ನೀರಿನ ಯೋಜನೆಯ ಕಾಮಗಾರಿಯು ಪೂರ್ಣಗೊಂಡಿದ್ದು, ಯಾವಾಗ ಚಾಲನೆಗೊಳ್ಳುವುದು. ಈ ಯೋಜನೆಯಿಂದ ಪ್ರತಿ ದಿವಸ ಎಷ್ಟು ಲಕ್ಷ ಲೀಟರ್ ಕುಡಿಯುವ ನೀರು ಪೂರೈಸಲಾಗುವುದು;